ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ನ್ಯಾಯಾಲಯ,
ಕುಣಿಗಲ್.

ಸಿ ಸಿ 37-2019

ಸಿ.ಡಬ್ಲ್ಯೂ-01
ಪಿ.ಡಬ್ಲ್ಯೂ-01

ಸಾಕ್ಷಿಗೆ ದಿಃ 23.07.2025 ರಂದು ಪ್ರಮಾಣ ವಚನ ಬೋದಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಆರೋಪಿಪರಃ ಶ್ರೀ.T.G.T ವಕೀಲರಿಂದಃ**

ಕಳ್ಳಿ ಕಡೆಯುವ ಜಾಗಕ್ಕೆ ಬಂದು ಪೋಲಿಸರು ಬಂದು ಮಹಜರ ಮಾಡಿರುತ್ತಾರೆ. ಮಹಜರಗೆ ಸಹಿಯನ್ನು ಸದರಿ ಜಾಗದಲ್ಲಿ ಪಡೆದಿರುತ್ತಾರೆ. ಕಳ್ಳಿ ಕಡೆಯುವ ಜಾಗ ನಮ್ಮ ಮನೆಯ ಮುಂದೆ ರಸ್ತೆ ಇದ್ದು ಅದನ್ನು ದಾಟಿದ ಬಳಿಕ ಬರುತ್ತದೆ. ನನ್ನ ಜಮೀನಿನ ನಂತರ ಸರ್ವೆ ನಂ 64 ರ ಜಮೀನು ಇರುತ್ತದೆ. ಸದರಿ ಜಮೀನಿನ ಬಗ್ಗೆ ಮಹಜರನಲ್ಲಿ ಬರೆದಿರುವುದಿಲ್ಲವೆಂದರೆ ನನಗೆ ಗೊತ್ತಿಲ್ಲ. ಹಾಗಾಗಿ ಪಂಚನಾಮೆಗೆ ಪೋಲಿಸರ ಹೇಳಿಕೆ ಮೇರೆಗೆ ಸಹಿ ಮಾಡಿರುತ್ತೇನೆ ಎಂದರೆ ಸರಿ. ಪಂಚನಾಮೆ ಸಮಯದಲ್ಲಿ 10 ಜನ ಸೇರಿದ್ದರು. ಇಬ್ಬರ ಸಹಿಯನ್ನು ಮಾತ್ರ ಪಂಚನಾಮೆಗೆ ಪಡೆದಿರುತ್ತಾರೆ. ನಿ.ಪಿ 2 ರಲ್ಲಿ ತೋರಿಸಿರುವ ಚಕ್ಕುಬಂದಿಯಲ್ಲಿ ಜಾಗ ರಸ್ತೆ ಆಗಿರುತ್ತದೆ ಎಂದರೆ ಸರಿ. ಸದರಿ ಜಾಗ ಕಳ್ಳಿ ಕಡೆಯುವ ಜಾಗ ಆಗಿರುವುದಿಲ್ಲವೆಂದರೆ ಸರಿಯಲ್ಲ. ಮು. ಮಾ. ಗಳಂತಹ ಸೀರೆಗಳು ಸಾಮಾನ್ಯವಾಗಿ ಎಲ್ಲರ ಮನೆಯಲ್ಲಿಯೂ ಇರುತ್ತದೆ ಎಂದರೆಸರಿ.

ಆರೋಪಿತರ ಮನೆ ನಮ್ಮ ಮನೆ ಅಕ್ಕಪಕ್ಕ ಇರುತ್ತದೆ. ಮಹಜರನಲ್ಲಿ ಎಲ್ಲಿಯೂ ಸಹ ಆರೋಪಿತರ ಮನೆ ಇರುವ ಬಗ್ಗೆ ಬರೆದಿರುವುದಿಲ್ಲವೆಂದರೆ ನನಗೆ ಗೊತ್ತಿಲ್ಲ. 13ನೇ ದಿನಾಂಕದಂದು ದೂರನ್ನು ಮಾತ್ರ ನೀಡಿರುತ್ತೇನೆ. ಚಾಸಾ 7 ಮತ್ತು 8 ಅವರೊಂದಿಗೆ ನನ್ನ ಸಂಬಂದ ಚನ್ನಾಗಿದೆ. ಅವರು ನನ್ನ ಸಂಬಂಧಿಗಳಾಗಿರುತ್ತಾರೆ. ಪೋಲಿಸರು ಸ್ಥಳಕ್ಕೆ ಬಂದಾಗ ಸಂಬಂಧಿಕರು ಅಲ್ಲದೇ ಬೇರೆ ಯಾರು ಬಂದಿರಲಿಲ್ಲ. ಸ್ಥಳದಲ್ಲಿ ಯಾವುದೆ ಗಲಾಟೆ ಆಗಿಲ್ಲ ಅವರ ಜಮೀನನ್ನು ಖಬಳಿಸುವ ಉದ್ದೇಶದಿಂದ ಸುಳ್ಳು ದೂರನ್ನು ನೀಡಿರುತ್ತೇನೆ ಎಂದರೆ

ಸರಿಯಲ್ಲ. ನನ್ನ ಕೊರಳ ಪಟ್ಟಿ ಹಿಡಿದಿಲ್ಲ ಹಲ್ಲೆ ಮಾಡಿಲ್ಲ ಚಪ್ಪಲಿಯಿಂದ ಹೊಡೆದಿಲ್ಲ ಸೀರೆಯನ್ನು ಎಳೆದಾಡಿಲ್ಲವೆಂದರೆ ಸರಿಯಲ್ಲ. ಆರೋಪಿತರು ಯಾವುದೇ ಪ್ರಾಣ ಬೆದರಿಕೆ ಹಾಕಿಲ್ಲ ಬಸವಲಿಂಗಪ್ಪ ಅವರು ಯಾವುದೇ ಕುಮ್ಮಕ್ಕು ನೀಡಿಲ್ಲವೆಂದರೆ ಸರಿಯಲ್ಲ. ಸ್ಥಳದಲ್ಲಿ ಮಹಜರ ಮಾತ್ತು ಮು. ಮಾ. ಗಳನ್ನು ಜಪ್ತು ಮಾಡಿಕೊಂಡಿಲ್ಲ ನಾನು ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿತರು ಯಾವುದೇ ಹಲ್ಲೆಯನ್ನು ಯಾರಿಗೂ ಮಾಡಿಲ್ಲವೆಂದರೆ ಸರಿಯಲ್ಲ. ಮಹಜರನ್ನು ಠಾಣೆಯಲ್ಲಿಯೇ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿತರಿಗೂ ಮತ್ತು ಮು. ಮಾ. ಗೂ ಪ್ರಕರಣಕ್ಕೂ ಯಾವುದೇ ಸಂಬಂದ ಇಲ್ಲವೆಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲಃ**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ.

ಸಹಿ/-

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.

ಕುಣಿಗಲ್.